ಹಿಂದಕ್ಕೆ ಉಳಿದು ದೇವತೆಗಳ ನಾಡಿಗಿಂತಲೂ ನಾವು ಮುಂದೆ ಹೋಗಿಬಿಟ್ಟೆವು. ಇದ್ದಕ್ಕಿದ್ದ ಹಾಗೆ ಬೆಚ್ಚಿಬಿದ್ದು ಮೋಹಿನಿ ಎದ್ದುನಿಂತು ಹೇಳಿದಳು: 'ಇನ್ನೂ ಇದೆ... ಹೋಗುತ್ತಿದೆ... ನೋಡು, ಅಲ್ಲಿ ತೇಲುತ್ತಾ ಹೋಗುತ್ತಿದೆ...'

ನಾನು ಕಣ್ಣೆತ್ತಿ ನೋಡಿದೆ. ಆ ದೀಪ ಹಾಗೆಯೇ ತೇಲುತ್ತಾ ವಾಲುತ್ತಾ ಮುಂದೆ ಮುಂದೆ ಸಾಗುತ್ತಲೇ ಇತ್ತು.

3

ಆ ದೀಪವನ್ನೇ ನೋಡುತ್ತ ನಾವು ಬಹುದೂರ ಸಾಗಿದೆವು. ಆಗ ಮೋಹಿನಿ ಹಾಡೊಂದರ ಆಲಾಪನೆ ಶುರುಮಾಡಿದಳು...


...ಹೊರಟೆ ನಾನು ನನ್ನ ಪ್ರಿಯತಮನ ಸೇರಲು...

ಆಹಾ! ಅದೆಂತಹ ಗೀತೆ! ಅದೆಂತಹ ಮಧುರವೇದನೆಯನ್ನು ಸೃಷ್ಟಿಸುವ ರಾಗ! ಪ್ರೀತಿ ಮತ್ತು ಕಣ್ಣೀರಿನಿಂದ ತುಂಬಿದ ಹಾಡು. ಮೋಹಕ ಗೀತೆಯಲ್ಲಿ ಕಲ್ಪನೆಗಳನ್ನು ಬಡಿದೆಬ್ಬಿಸುವ ಶಕ್ತಿ ಇರುತ್ತದೆ. ಅದು ಮನುಷ್ಯನನ್ನು ಈ ಭೌತಿಕ ಲೋಕದಿಂದ ಮೇಲೆತ್ತಿ ಕಲ್ಪನಾಲೋಕಕ್ಕೆ ತಲುಪಿಸಿ ಬಿಡುತ್ತದೆ. ಆ ಹೊತ್ತಿನಲ್ಲಿ ನನ್ನ ಕಲ್ಪನೆಯ ಕಣ್ಣುಗಳಿಗೆ ನದಿಯ ಆ ಪ್ರವಾಹ, ಮೊರೆಯುತ್ತಿರುವ ನೀರು, ಅಲೆಗಳು, ನದಿಯ ಕಿನಾರೆಯಲ್ಲಿ ಓಲಾಡುತ್ತಿರುವ ಮರ, ಟೊಂಗೆಗಳು, ಸುಂಯ್‌ಗುಡುತ್ತ ಬೀಸುವ ಗಾಳಿ, ಎಲ್ಲವೂ ತಂತಮ್ಮ ರೂಪಧಾರಣೆ ಮಾಡಿಕೊಂಡು ವೇಗವಾಗಿ ಹೆಜ್ಜೆ ಹಾಕುತ್ತ ಸಾಗುತ್ತಿವೆಯೇನೋ ಎಂಬಂತೆ ಗೋಚರಿಸುತ್ತಿದ್ದವು. ಪ್ರೇಮದ ಉತ್ಕಟತೆಯಿಂದ ಓಲಾಡುತ್ತಿದ್ದ ಒಬ್ಬಳು ಯುವತಿ ಮಸುಕು ಮಸುಕಾದ ಕನಸಿನ ಚಿತ್ರದ ಹಾಗೆ ಗಾಳಿಯಲ್ಲಿ ಅಲೆಗಳ ಮೇಲೆ ಮರಗಳ ತೋಪಿನ ನಡುವೆ ನಡೆಯುತ್ತ ಆಲಾಪಿಸುತ್ತಿದ್ದ ಹಾಗೆ ಇತ್ತು ಆ ಹಾಡು. ಪ್ರಿಯತಮನೆಡೆಗೆ ಸಾಗುವ ಹಾಡು. ಈ ಗೀತೆ ಆ ಹೊತ್ತಿನ ಇಡೀ ವಾತಾವರಣದಲ್ಲಿ ಮೋಡಿಮಾಡಿ ಉತ್ಕಟತೆಯ ಜಾದು ಹರಡಿದಂತೆ ಭಾಸವಾಗುತ್ತಿತ್ತು...

ಹೊರಟೆ ನಾನು ನನ್ನ ಪ್ರಿಯತಮನ ಸೇರಲು
ಎಲ್ಲಿರುವನೋ ಪ್ರಿಯತಮ ಕಾಣದೂರಿನಲಿ
ಹುಚ್ಚಿ ನಾನು, ನಾನೆಂತು ಅರಿಯಲಿ
ಸೇರಲಾಗದಿದ್ದರೂ ಅವನ ಪ್ರೀತಿ ಸಾಕು ಉಳಿಯಲಿ
ಹೊರಟೆ ನಾನು ನನ್ನ ಪ್ರಿಯತಮನ ಸೇರಲು

ಮೋಹಿನಿ ಈಗ ಮೌನವಾದಳು. ಸುತ್ತಲೂ ನಿಶ್ಶಬ್ದ ಆವರಿಸಿತ್ತು. ನಂತರ ಆ ನಿಶ್ಶಬ್ದದ ನಡುವೆಯೇ ಒಂದು ಮಂದ್ರವಾದ ಮಧುರವಾದ ಸ್ವರವೊಂದು ಕ್ಷಿತಿಜದ ಆ ಅಂಚಿನಿಂದ ನದಿಯ ನೀರಿನಾಳದಿಂದ ಅಥವಾ ಗಾಳಿಯ ಅಲೆಗಳೊಂದಿಗೆ ತೇಲಿಬರುತ್ತ ಮನಃಪಟಲವನ್ನು ತಟ್ಟುತ್ತಿರುವಂತೆ ಅನ್ನಿಸುತಿತ್ತು. 'ಹೊರಟೆ ನಾನು ನನ್ನ ಪ್ರಿಯತಮನ ಸೇರಲು...'

ನಾನು ಈ ಗೀತೆಯಿಂದ ಅದೆಷ್ಟು ಪ್ರಭಾವಿತನಾದೆನೆಂದರೆ ಕ್ಷಣಹೊತ್ತಿನವರೆಗೆ ನಾನೆಲ್ಲಿದ್ದೇನೆ, ಎಲ್ಲಿಗೆ ಹೋಗುತ್ತಿದ್ದೇನೆ ಎಂಬ ಅರಿವೇ ಇಲ್ಲದಂತಾಯಿತು. ಮೈಮನಗಳಲ್ಲಿ ಅದೇ ರಾಗ ಅನುರಣಿಸತೊಡಗಿತ್ತು. ತಕ್ಷಣ



ಮೋಹಿನಿ ಹೇಳಿದಳು: 'ಆ ದೀಪವನ್ನು ನೋಡು...' ನಾನು ದೀಪದ ಕಡೆಗೆ ನೋಡಿದೆ. ಅದರ ಬೆಳಕು ಕ್ಷೀಣವಾಗತೊಡಗಿತ್ತು ಮತ್ತು ಅದರ ಆಯುಸ್ಸಿನ ಮೊತ್ತ ಮುಗಿಯುವ ಹಂತಕ್ಕೆ ತಲುಪಿತ್ತು. ಕೊನೆಯ ಗಳಿಗೆಯಲ್ಲಿ ಅದು ಎತ್ತರವಾಗಿ ಪ್ರಜ್ವಲಿಸಿ ಕ್ಷಣಮಾತ್ರದಲ್ಲಿ ನಂದಿಹೋಯಿತು. ನದಿಯ ನೀರಿನಲ್ಲಿ ಮಳೆಹನಿ ಬಿದ್ದು ಮಾಯವಾಗುವ ಹಾಗೆಯೇ ಕತ್ತಲೆಯ ಆವರಣದೊಳಗೆ ದೀಪದ ಅಸ್ತಿತ್ವ ವಿಲೀನವಾಗಿಹೋಯಿತು. ಮೋಹಿನಿ ಮೆಲ್ಲನೆ ಹೇಳಿದಳು. 'ಇನ್ನು ಅದು ಕಾಣಿಸುವುದಿಲ್ಲ. ಆರಿಹೋಯಿತು...' ಹೀಗೆಂದ ಆಕೆ ತಣ್ಣನೆಯ ನಿಟ್ಟುಸಿರೊಂದನ್ನು ಹೊರಹಾಕಿದಳು. ನೋವು ಉಮ್ಮಳಿಸಿ ಬಂತು. ಕಣ್ಣೀರಿನಿಂದ ಕೆನ್ನೆ ತೊಯ್ದುಹೋಯಿತು. 'ಕೊನೆಗೂ ಇದೇ ಅದರ ಅಂತಿಮ ಗುರಿಯಾಯಿತೇ...' ಎಂಬ ಉದ್ಗಾರನಷ್ಟೇ ಅವಳ ಬಾಯಿಯಿಂದ ಹೊರಟಿತು.

ನನ್ನ ಕಣ್ಣುಗಳೆದುರಿನಿಂದ ಪರದೆಯೊಂದು ಸರಿದಂತಾಯಿತು. ಮೋಹಿನಿಯ ಕಳವಳ, ಅಧೈರ್ಯ, ಬೇಸರದ ರಹಸ್ಯ ನನಗೀಗ ಅರ್ಥವಾಗಿ ನನ್ನ ಕಣ್ಣುಗಳಿಂದಲೂ ಹನಿಹನಿಯಾಗಿ ಕಣ್ಣೀರು ಹನಿಯಿತು. ಆ ಆರ್ಭಟಿಸುತ್ತಿದ್ದ ಅಪಾಯಕಾರಿ ಬಿರುಗಾಳಿಯ ನಡುವಿನ ಪ್ರಯಾಣದ ಅಂತಿಮ ಗುರಿ ಇದೇ ಆಗಿತ್ತೇನು?

ಮಾರನೆಯ ದಿನ ಮೋಹಿನಿ ಎಚ್ಚರಗೊಂಡಾಗ ಅವಳ ಮುಖ ಹಳದಿ ಬಣ್ಣಕ್ಕೆ ತಿರುಗಿತ್ತು. ಆಕೆಗೆ ರಾತ್ರಿಯಿಡೀ ನಿದ್ದೆ ಹತ್ತಿರಲಿಲ್ಲ. ಅವಳು ಕವಿ ಹೃದಯದವಳಾಗಿದ್ದಳು. ಹಿಂದಿನ ರಾತ್ರಿಯ ಆ ವೇದನಾಯುಕ್ತ ಭಾವುಕ ಘಟನೆ ಆಕೆಯ ಮೇಲೆ ಇನ್ನಿಲ್ಲದ ಪರಿಣಾಮ ಬೀರಿತ್ತು. ನಗುವೆಂಬುದು ಆಕೆಯ ತುಟಿಗಳ ಮೇಲೆ ಅಪರೂಪಕ್ಕೆ ವ್ಯಕ್ತವಾಗುತ್ತಿತ್ತಾದರೂ ಅವಳ ಮುಖ ಸದಾ ಅರಳಿದಂತಿರುತ್ತಿತ್ತು. ಆದರೆ ಇಂದು ಆ ಹಸನ್ಮುಖವೂ ಅವಳಿಂದ ದೂರವಾಗಿ ಮುಖದ ಮೇಲೆ ಒಂದು ರೀತಿಯ ಉದಾಸೀನತೆ ನೆಲೆಸಿತ್ತು. ಆಕೆ ಮಾತನಾಡಿದರೆ ಹೃದಯವೇ ಛಿದ್ರವಾಗಿ ಅಳು ಬಂದುಬಿಡುತ್ತಿತ್ತು. ನಾನು ವೇದನೆಯಿಂದ ಅವಳನ್ನು ದೂರವಿಡಲು ಎಷ್ಟೋ ಸಾರಿ ನಗೆಬರಿಸುವಂತಹ ಕಥೆಗಳನ್ನು ಹೇಳಿದೆ. ಆದರೆ ಆಕೆ ಇತ್ತ ಗಮನಹರಿಸಲೇ ಇಲ್ಲ. ಹಾಂ, ನಾನು ಮನೆಯಲ್ಲಿ ಇಲ್ಲದ ಸಮಯದಲ್ಲಿ ಅವಳ ಕವಿತೆಗಳನ್ನು ಓದುತ್ತಿದ್ದಳು. ಇದರರ್ಥ ಆಕೆಗೆ ಕವಿತೆಗಳನ್ನು ಓದುವುದರಲ್ಲಿ ಆಸಕ್ತಿ ಇದೆ, ಆನಂದ ದೊರೆಯುತ್ತದೆ ಎಂದಲ್ಲ. ಬದಲಾಗಿ ಓದುವುದರಿಂದ ತಾನು ಅಳುವುದಕ್ಕೆ ಏನಾದರೂ ಒತ್ತು ಸಿಗಬಹುದು ಎಂದು ಹೃದಯವನ್ನು ಹಿಂಡುವಂತಹ ಕವಿತೆಗಳನ್ನೇ ಆಕೆ ಓದುತ್ತಿದ್ದಳು. ಆ ಕವಿತೆಗಳನ್ನು ಯಾರೇ ಓದಿದರೂ ಕಣ್ಣೀರನ್ನು ಬಂಧಿಸಿಡಲು ಸಾಧ್ಯವೇ ಆಗುತ್ತಿರಲಿಲ್ಲ. ಒಮ್ಮೊಮ್ಮೆ ಆಕೆಯೂ ತನ್ನ ಕವಿತೆಗಳನ್ನು ನನಗೆ ಓದಿ ಹೇಳುತ್ತಿದ್ದಳು. ನಾನು ವೇದನೆಯಿಂದ ಒದ್ದಾಡುತ್ತ ಆ ಕವಿತೆಗಳ ಪ್ರಶಂಸೆ ಮಾಡಿದರೆ ಆಕೆಯ ಕಣ್ಣಲ್ಲಿ ಆತ್ಮಸಂತೋಷದ ಅಮಲು ಇಣುಕುತ್ತಿತ್ತು. ನಗು ತಮಾಷೆಆನಂದ, ಇವು ಕೆಲವರ ಮನಸ್ಸಿನ ಮೇಲೆ ಪರಿಣಾಮ ಬೀರಬಹುದು. ಆದರೆ ಯಾವ ಭಾವಆನಂದದಿಂದಲೂ ಕರಗದಂತಹ ಅದೆಂತಹ ಹೃದಯ...!

ಒಂದು ದಿನ ನಾವಿಬ್ಬರೂ ಇದೇ ಉದ್ಯಾನದಲ್ಲಿ ವಿಹರಿಸುತ್ತಿದ್ದೆವು. ಚೈತ್ರಮಾಸದ ಒಂದು ಸಂಜೆಯ ಸಮಯ. ಮೋಹಿನಿ ಇಂದು ಲವಲವಿಕೆಯಿಂದಿದ್ದಳು. ಎಷ್ಟೋ ದಿನಗಳ ಬಳಿಕ ಅವಳ ತುಟಿಗಳ ಮೇಲೆ ಮುಗುಳ್ನಗುವಿನ ಚಿಹ್ನೆ ಮೂಡಿತ್ತು. ಕತ್ತಲಾಗುತ್ತಿದ್ದಂತೆ ಗಂಗೆಯ ಮಡಿಲಿನಿಂದ ಪೌರ್ಣಿಮೆಯ ಚಂದ್ರ ಎದ್ದು ನಿಧಾನವಾಗಿ ಮೇಲಕ್ಕೇರಲಾರಂಭಿಸಿದ್ದ. ನಾವು ಅದೇ ಕೊಳದ ಕಟ್ಟೆಯ ಮೇಲೆ ಕುಳಿತೆವು. ಆ ಬಕುಲ ಮರಗಳ ಸಾಲು ಮತ್ತು ಆ ಚಿಕ್ಕದೋಣಿ ಇನ್ನೂ ಮೋಹಿನಿಯ ಸ್ಮೃತಿ ಕುರುಹಾಗಿ ಉಳಿದಿವೆ. ಬೆಳ್ದಿಂಗಳು ಪಸರಿಸುತ್ತಾ ಹೋಯಿತು. ಇಂದು ಮೋಹಿನಿಯಲ್ಲಿನ ತಾಜಾತನ ಅವಳ ಸೌಂದರ್ಯವನ್ನು ಇಮ್ಮಡಿಗೊಳಿಸಿತ್ತು. ಅವಳ ಮೋಹಕ ಚಂಚಲತೆ ನನ್ನನ್ನು ಹುಚ್ಚನಂತಾಗಿಸಿಬಿಟ್ಟಿತ್ತು. ನಾನು ಸಾಕಷ್ಟು ಬಾರಿ ವಿನೋದಲೀಲೆಗಳನ್ನಾಡಿದೆ. ಪ್ರತೀ ಸಾರಿಯೂ ಸೋಲು ನನ್ನದೇ ಆಗಿತ್ತು. ಹಾಗೆ ನೋಡಿದರೆ ಸೋಲುವುದರಲ್ಲಿ ಇರುವ ಆನಂದ ಗೆಲುವಿನಲ್ಲಿ ಎಲ್ಲಿದೆ? ತೆಳುವಾದ ಉನ್ಮಾದದಲ್ಲಿಯೇ ಖುಷಿ ಇದೆಯೇ ಹೊರತು ತಿಂದುಉಂಡು ಮದವೇರಿಸಿಕೊಳ್ಳುವುದರಲ್ಲಿ ಇರುವುದಿಲ್ಲ.

ಬೆಳ್ದಿಂಗಳು ಸುತ್ತೆಲ್ಲ ಹರಡಿತ್ತು. ಇದ್ದಕ್ಕಿದ್ದ ಹಾಗೆ ಮೋಹಿನಿ ಗಂಗೆಯ ಕಡೆಗೆ ನೋಡಿ ನನಗೆ ಹೇಳಿದಳು. 'ಆ ಕಡೆ ಅದೆಂತಹ ಬೆಳಕು ಕಾಣಿಸುತ್ತಿದೆ?' ನಾನೂ ಕೂಡ ಆ ಕಡೆಗೇ ದೃಷ್ಟಿಹಾಯಿಸಿದೆ. ಅಲ್ಲೊಂದು ಚಿತೆಯಲ್ಲಿ ಬೆಂಕಿ ಉರಿಯುತ್ತಿತ್ತು. ನಾನು ಅದನ್ನು ತಪ್ಪಿಸಿ, 'ನಾವಿಕರು ಅಡುಗೆ ಮಾಡಿಕೊಳ್ಳುತ್ತಿದ್ದಾರೆ...' ಎಂದು ಹೇಳಿದೆ.

ಮೋಹಿನಿಗೆ ವಿಶ್ವಾಸ ಮೂಡಲಿಲ್ಲ. ಅವಳ ಮುಖದ ಮೇಲೆ ಒಂದು ಬೇಸರದ ನಗು ಒಡಮೂಡಿ ಕಣ್ಣುಗಳು ತೇವಗೊಂಡವು. ಬೆಂಕಿಯ ಝಳ ಹೂವಿನ ಮೇಲೆ ಬೀಸಿದಾಗ ಉಂಟಾಗುವ ಪರಿಣಾಮ ಆಗ ಆಕೆಯ ಭಾವುಕ, ವೇದನಾಪೂರ್ಣ ಹೃದಯದ ಮೇಲೆ ಉಂಟಾಯಿತು.

ಸ್ವಲ್ಪ ಸಮಯ ಮೌನವಾಗಿದ್ದು ಸ್ಥಿರವಾಗಿ ಕುಳಿತಿದ್ದಳು ಆಕೆ. ನಂತರ ಪುನಃ ನಿಧಾನವಾಗಿ ಶೋಕಭರಿತ ಸ್ವರದಲ್ಲಿ ಹೇಳಿದಳು...

...ಅದು ತನ್ನ ಅಂತಿಮ ಗುರಿಯನ್ನು ತಲುಪಿಬಿಟ್ಟಿತು...

ಪ್ರತಿಕ್ರಿಯಿಸಿ: feedback@sudha.co.in